## ಮನದ ಭಾಷೆಯ ‘ಚೆನ್ನುಡಿ’

**‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್ ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.**

ಮುಗಲಾಗಿನ ಚಂದಪ್ಪ ಕೆಳಗ ಬರೂದಿಲ್ಲ ಅನ್ನೊ ಖಾತ್ರಿ ಇದ್ದs ಹಂಗಂದಿರ್ಬೇಕು. ಇಲ್ಲಾ, ಅವ್ರು ಯಾವತ್ತೂ ನಿಂಬಿ ಬನ ಹೊಕ್ಕ ಬಂದಂಗ ಕಾಣಂಗಿಲ್ರಿ, ಇಲ್ಲಿಕ್ರ ಚಂಡಾಡೊ ಚಂದ ಗೊತ್ತಾಗಿರೂದು.

ನಿಂಬಿಹಣ್ಣು ಅಂದ್ರ ನಮ್ಮೂವು ಅಂತಿಂಥಾ ನಿಂಬಿಹಣ್ಣಲ್ಲ, ಹಂಗಂದ್ರ ದಮ್ಮ ದಪ್ಪನ್ನ ಹಣ್ಣಲ್ಲ, ತೆಳ್ಳನ ಸಿಪ್ಪಿ ಒಳಗ ಹೊಟ್ಟಿ ತುಂಬಾ ಭರ್ಚೀಕ್ ರಸಾ ತುಂಬ್ಕೊಂಡಿರೊ ನಿಂಬಿಹಣ್ಣು. ಮಣಿಪುರದ ‘ಕಚ್ಚೈ ನಿಂಬು’ ನಂತ್ರ ಜಿಐ (GI—Geographical Indication) ಟ್ಯಾಗ್ ಪಡ್ಕೊಂಡ ಎರಡನೇ ನಿಂಬಿಹಣ್ಣ್ ಅಂದ್ರ ನಮ್ಮ ಇಂಡಿಯ ಕಾಗ್ಜಿ ನಿಂಬಿಹಣ್ಣು. ವರ್ಲ್ಡ್ ಫೇಮಸ್ಸು! ಬಿಜಾಪುರ ಅಂದ್ರ, ಈಗೇನ್ ವಿಜಯಪುರ ಅಂತೀವಲ್ಲ ಅದು ನಮ್ಮ ಜಿಲ್ಲಾ. ಇಂಡಿ ಅದರದ್ದ ಒಂದು ತಾಲ್ಲೂಕು. ನನ್ನ ತವರು ಇಂಡಿ ತಾಲ್ಲೂಕಿನ ನಿಂಬಾಳ. ಭಾಳ ಮಾಡಿ ನಿಂಬಿ ಬೆಳಿಯೊ ಊರು (ಹಾಳ= ಇರುವುದು) ಅನ್ನೂದಕ್ಕನ ನಿಂಬಾಳ ಅಂತ ಹೆಸರು ಬಂದೇತೇನೋ ನಮ್ಮೂರಿಗೆ. ಇಡೀ ಜಿಲ್ಲಾದಾಗ ಅದರಾಗೂ ಹೆಚ್ಚಾಗಿ ಇಂಡಿ ತಾಲ್ಲೂಕಿನ್ಯಾಗ ನಿರಾವರಿ ಒಕ್ಕಲತನ ಇದ್ದೋರೆಲ್ಲಾ ನಿಂಬಿಹಣ್ಣು ಬೆಳಿತಾರ. ಎಕ್ಸ್ಪೋರ್ಟ್ ಆಕ್ಕಾವಿವು. ಈ ಇಂಡಿಯ ಕಾಗ್ಜಿ ನಿಂಬಿಹಣ್ಣು ಹೆಂಗಂದ್ರ, ಅದರ ಒಂದ್ ಹನಿ ರಸಾ ನೀವು ಬಾಯಿಗೆ ಬಿಟ್ಕೊಂಡ್ರಿ ಅಂದ್ರ, ಅದರ ಹುಳಿಗೆ ಚಿಲ್ಲ್ ಅಂತ ನಿಮ್ಮ ಬಾಯಿಂದ ಲಾಲಾರಸದ ಕಾರಂಜಿ ಹೊರಗ ಚಿಮ್ಮತೈತಿ. ಹಲ್ಲಿಗೆ ರಸಾ ಹತ್ತ್ರಿದ್ರ ಚುಳ್ ಅಂತಾವು ಹಲ್ಲು. ಆಮ್ಯಾಲೆ ನೋಡ್ರಿ ನಾಲ್ಗಿ ಪೂರಾ ಸಿಹಿ ಸಿಹಿ. ನನ್ನ ತವರಿಂದ ಯಾರ್ ಬಂದ್ರೂ ತಪ್ಪದ ನಾಲ್ವತ್ತು ಐವತ್ತು ನಿಂಬಿಹಣ್ಣು ಚೀಲದಾಗ ಹಾಕ್ಕೊಂಡ ಬರ್ತಾರ ನಮ್ಮಲ್ಲಿಗೆ. ಹಿಂಗಾಗಿ ನಾವು ಹೊರಗ ಕೊಂಡ್ಕೊಳ್ಳೂದು ಕಮ್ಮಿ. ದುಂಡಗ ಸಾಧಾರಣ ಮೈಕಟ್ಟಿನ್ವು. ಆದ್ರ ರಸಾ ಅಸಾಧಾರಣ. ಹಣ್ಣು, ಮ್ಯಾಲೆ ಒಣಗಿ ಮುದುಡ್ಯಾಗಿದ್ರೂ, ಒಳಗಿನ ರಸಾ ಇಂಗಿರಂಗಿಲ್ಲ. ಹಿಂಗಾಗಿ ಒಣಗ್ಯಾವು ಕಸಕ್ಕ ಹಾಕ್ರಿ ಅನ್ನು ಮಾತs ಇಲ್ಲ. ಅನ್ನ ಬ್ಯಾಳಿ ಕುದಸೂ ಮುಂದ, ನೀವು ಹಿಂಡಿದ ನಿಂಬಿಹಣ್ಣಿನ ಸಿಪ್ಪಿನ (ಯಾವ ತಳಿದಾದ್ರೂ ಅಡ್ಡಿಯಿಲ್ಲ) ಕುಕ್ಕರ ತಳದಾಗಿನ ನೀರಾಗ ಹಾಕಿದ್ರ, ಕುಕ್ಕರ್ ಒಳಗಿನ ಬಾಜು ಫಳಾಫಳ ಅಂತತಿ. ಟ್ರೈ ಮಾಡಿ ನೋಡ್ರಿ ಬೇಕಿದ್ರ.

‘ಕೈಗೆಟುಕದ ದ್ರಾಕ್ಷಿ ಹುಳಿ’, ‘ದಾಳಂಬ್ರಿ (ದಾಳಿಂಬೆ) ಅಂಥಾ ಹಲ್ಲು’ ಅಂತನ್ನೂದನ್ನ ಕೇಳೂದೇನು ನೀವೂ ಭಾಳಷ್ಟು ಸಲ ಅಂದಿರ್ತೀರಿ. ಈ ದ್ರಾಕ್ಷಿ ಮತ್ತ ದಾಳಂಬ್ರಿಗೂ ನಮ್ಮ ಜಿಲ್ಲಾ ಫೇಮಸ್ಸು ಅನ್ನೂದನ್ನ ನಾ ಏನ್ ಮತ್ತ ಪ್ರತ್ಯೇಕ ಹೇಳಬೇಕಾಗಿಲ್ಲ ನಿಮಗ ಅಲ್ಲಾ? ಮಜಾ ಅಂದ್ರ ಸಣ್ಣಾಕಿದ್ದಾಗ, ‘ದಾಳಂಬ್ರಿ ಕೆಂಪಗಿರ್ತಾವ, ಅದನ್ಯಾಕ ಬೆಳ್ಳನ ಹಲ್ಲಿಗೆ ಹೋಲಸ್ತಾರ?!’ ಅಂತ ತಲಿ ಕೆಡಸ್ಕೊಂಡಿದ್ದೆ ಶ್ಯಾಣಿ ನಾ.

ದಾಳಂಬ್ರಿನ ದೊಡ್ಡ ಪ್ರಮಾಣದಾಗ ಬೆಳೀತಾರ ನಮ್ಮಡಿ ರೈತರು. ಅವು ಬ್ಯಾರೆ ದೇಶಕ್ಕೆಲ್ಲಾ ರಫ್ತ್ ಆಕ್ಕಾವಂತ ಗೊತ್ತು. ಅದಕ್ಕಿನ್ನ ಹೆಚ್ಚಿನ ಮಾಹಿತಿ ಇಲ್ಲ ನನಗ. ದಾಳಂಬ್ರಿ ಹಣ್ಣಿನ ರಸದಿಂದ ರಕ್ತ ಹೆಚ್ಚಾಕ್ಕತಿ ಅಂತ. ಹೃದಯಕ್ಕ ಒಳ್ಳೇದಂತ, ಹಂಗs ಲೂಸ್ ಮೋಷನ್ ಚಾಲೂ ಆದ್ರ, ಈ ಹಣ್ಣು ತಿನ್ನೂದ್ರಿಂದ ನಿಂದರ್ತೈತಿ. ದಾಳಂಬ್ರಿಯಾಗ್ಲಿ, ದ್ರಾಕ್ಷಿ ಆಗ್ಲಿ, ಈಗ ಹೆಚ್ಚಾಗಿ ಸೀಡ್ಲೆಸ್ಸs ಸಿಗ್ತಾವು. ಮದ್ಲಾದ್ರ, ಹಣ್ಣಿನ ಒಳಗಿನ ಬೀಜಾ ಎಲ್ಲಾ ದವಡ್ಯಾಗ ಇಟ್ಕೊಂಡು, ರಸಾ ನುಂಗಿ ಬೀಜಾ ಉಗುಳ್ತಿದ್ವಿ. ಆಗ ಆ ತ್ರಾಸ ಇಲ್ಲ ನೋಡ್ರಿ.

ದ್ರಾಕ್ಷಿ ನೋಡದ ಇರೋರು, ತಿನ್ನದ ಇರೋರು ಯಾರ ಅದಾರ ಈ ಜಗತ್ತಿನ್ಯಾಗ? ಆದ್ರ ಈ ದ್ರಾಕ್ಷಿ ಬೇಳಿದು ಭಾಳ ದೌಲತ್ತು! ಪೇಶ್ವೆಗೊಳ ಕಾಲದಾಗ ಚಲುವಿ ಮಸ್ತಾನಿ ಇದ್ಲಲ್ರಿ, ಆ ಮಸ್ತಾನಿ ಪಾನ್ ತಿಂದು ರಸಾ ನುಂಗಿದ್ರ, ಅದು ಕೆಂಪಗ ಅಕಿನ್ನ ಗಂಟ್ಲಾಗಿಳಿಯೂದು ಕಾಣ್ತೈತಂತ ಅಂಥಾ ಚರ್ಮ ಅಕಿದು! ಮತ್ತ ಈ ಹಣ್ಣಿಂದೂ ಹಂಗ, ಮೇಣದಲೇ ಮಾಡ್ಯಾರೇನೋ ಅನ್ನುವಂಥಾ ಹಸರು, ತಿಳಿಹಳದಿ ಬಣ್ಣದ ಮೈಪದರಿನ ಒಳಗಿರೋ ರಸರಸ ತಿರುಳು ಕಣ್ಣಿನ ಅರವಿಗೆ ಬರ್ತತಿ! ಬಲೂ ನಾಜೂಕ್ ಪ್ರಕೃತಿ ಇದರದ್ದು. ಅದೇನ ಅಂತಾರಲ್ಲ, ತೀರ್ಥ ತೊಗೊಂಡ್ರ ಶೀತ, ಮಂಗಳಾರ್ತಿ ತೊಗೊಂಡ್ರ ಉಷ್ಣ ಅಂತ. ಆ ಪೈಕಿ ಇದು. ಬಿಸಲು ನಾಡಿನ್ಯಾಗ ಹುಟ್ಟಿದ್ರೂ, ಹೂವ, ಕಾಯಿ ಬಿಡು ಟೈಮಿನ್ಯಾಗ, ಕಾಯಿ ಹಣ್ಣ ಆಗೂ ಮುಂದ ಇದಕ್ಕ ಹೆಚ್ಚ ಬಿಸಲು ಆಗಿ ಬರಂಗಿಲ್ಲಂತ್ರಿ. ಮಳಿನೋ, ಮಾಡೋ, ತಂಪೋ ಮಂಜೋ ಊಂಹೂಂ ಯಾವ್ದೂ ಆಗಿ ಬರಂಗಿಲ್ಲ. ಯಾವಾಗ್ ನೋಡಿದ್ರೂ ಔಷಧ್ ಬಾಟ್ಲಿ ಕೈಯಾಗ ಹಿಡಕೊಂಡು, ಕುಂಚಗಿ ಕುಲಾಯಿ ಜೊತಿಗೆ ತಯಾರ್ ನಿಂತಿರ್ಬೇಕು ಇದನ್ನ ಜ್ವಾಕಿ ಮಾಡೋರು. ದ್ರಾಕ್ಷಿ ಬಳ್ಳಿಗೆ ಔಡಲ ಎಲಿ ಆಕಾರದ ಎಲಿ ಇರ್ತಾವ. ಒಂದೊಂದು ಬಳ್ಳಿಗೂ ಒಂದೊಂದು ಕಂಬ, ಆಸರಕ್ಕ. ಬಳ್ಳಿ ಬೆಳದು ಹಬ್ಬಿ ನಿಂತಾಗ ನೋಡಬೇಕು ನೀವು ಅದರ ಸೊಬಗನ್ನ. ಒಳೇ ಮನಿ ಮುಂದ ಮದವಿ ಚಪ್ಪರಾ ಹಾಕಿದಂಗ ಎಷ್ಟ್ ಚಂದ ಕಾಣ್ತತಿ ಅಂತೀರಿ! ಅದನ್ನ ನೋಡಿದಾಗೆಲ್ಲ ನನಗ ‘ಜೋಗಿ ಜಂಗಮರೇ ಹೋಗಿ ನನ್ನ ತವರಿಗೆ’ ಅನ್ನೊ ಜಾನಪದ ಹಾಡಿನ್ಯಾಗಿನ, ‘ಮುತ್ತೈದಿ ಮನಿಮುಂದ ಮುತ್ತಿನ ಚಪ್ಪರ ಹೂಡಿ, ನಟ್ಟನಡುವಲ್ಲಿ ಪಗಡಿಯ, ನಟ್ಟನಡುವಲ್ಲಿ ಪಗಡಿಯನಾಡ್ತಾಳೆ ಅವಳೇ ನೋಡಿ ನನ್ನ ಹಡೆದವ್ವ’ ಅನ್ನೋ ನುಡಿ ನೆನಪಾಗಿ ತವರು ನೆನಪಾಗ್ತತಿ. ನನ್ನ ತವರಮನ್ಯಾಗ ನಾವು ದ್ರಾಕ್ಷಿ ಬೆಳಿಯೂದಿಲ್ಲ ಖರೆ, ಆದ್ರ ನಮ್ಮೂರೂ ಸೇರಿ, ನಮ್ಮ ವಿಜಯಪುರ ಜಿಲ್ಲಾದಾಗ ಹೆಚ್ಚುಕಮ್ಮಿ 70 ಸಾವಿರ ಎಕರೆದಷ್ಟು ಬರೇ ದ್ರಾಕ್ಷಿನ ಬೆಳಿತಾರಂತ ಓದಿದ ನೆನಪು.

ಮನೂಕ ಅಂದ್ರ ಒಣ ದ್ರಾಕ್ಷಿ ಸೈತ ನಮ್ಮ ಜಿಲ್ಲಾದಗs ತಯಾರ ಮಾಡ್ತಾರ. ಒಟ್ಟ ದ್ರಾಕ್ಷಿ ಇದ್ರಾತು ಮನೂಕ ಮಾಡಬಹುದು ಅನ್ನೂವಂಗಿಲ್ಲ. ಮನೂಕ ಮಾಡಾಕಂತನ ಒಂದು ಬ್ಯಾರೆ ತಳಿ ದ್ರಾಕ್ಷಿ ಇರ್ತಾವಂತ್ರಿ. ಅವುನ್ನೂ ನಮ್ಮಲ್ಲೇ ಬೆಳಿತಾರ. ಬರೋಬ್ಬರಿ ಪ್ರೊಸೆಸ್ ಆಗಿ ತಯಾರಾಗು ವಿಜಯಪುರದ ಮನೂಕ, ಬೊಗಸ್ಯಾಗ ತುಂಬಿಕೊಂಡ್ರ ಹಂಗ, ಹಂಗ ಬೊಗಸಿ ತುಂಬ ಬಂಗಾರದ ಗುಂಡ ತುಂಬ್ಯಾವು ಅನಸ್ತತಿ ನೋಡ್ರಿ.

ಮನೂಕ ಅನ್ನುತ್ಲೇ ನನ್ನದೊಂದು ಸಾಹಸ ನೆನಪಾತು. ಹಿಂದೊಮ್ಮೆ ನನ್ನ ಒಂದು ಅಂಕಣದಾಗೂ ಇದರ ಬಗ್ಗೆ ಬರ್ದಿದ್ದೆ. 1998—99ರ ಸುಮಾರ ಒಂದ್ ದೀಡ್ ವರ್ಷದ ಮಟ್ಟಿಗೆ ನಾವು ಮೊದ್ಲಮ್ಮೆ ಬೆಂಗಳೂರಾಗಿದ್ವಿ. ಆಗ ಒಮ್ಮಿಂದೊಮ್ಮೇ ನನಗ ಬ್ಯುಸಿನೆಸ್ ಮಾಡೊ ಹುಕಿ ಬಂದು, ಹೋಲ್ ಸೇಲ್ ರೇಟ್ ಒಳಗ ಊರಿಂದ ಮನೂಕ ತಂದು ಬೆಂಗಳೂರಾಗ ಮಾರೂದು ಅನಕೊಂಡೆ. ಅನಕೊಂಡಂಗ ಅರ್ಧಾ ಕ್ವಿಂಟಲ್ ಮನೂಕ ತಂದೂ ಬಿಟ್ಟೆ. ಬ್ಯುಸಿನೆಸ್ಸಿನ ಬಿ ಸುದ್ದಾ ಗೊತ್ತಿರ್ಲಿಲ್ಲ ನನಗ ಆಗ. ಆಗೇನ್ ಬಿಡ್ರಿ ಈಗೂ ಗೊತ್ತಿಲ್ಲ ಆ ಮಾತ್ ಬ್ಯಾರೆ. ಅಂಗಡ್ಯಾಗಿನಕಿಂತ ಹತ್ತಿಪ್ಪತ್ತು ರೂಪಾಯಿ ಕಮ್ಮಿದ್ರಾಗ ಮಾರಿದ್ರ, ಮಂದಿ ಮುಗಿಬಿದ್ದು ತೊಗೋತಾರ ಅಂತ ನನ್ನ ಲೆಕ್ಕಾಚಾರ. ಸುರುವಾತಿಗೇನೋ ನಮ್ಮ ಆಜೂಬಾಜು ಮನಿಯೋರು, ನಮ್ಮನಿ ಓನರ್ರು ಎಲ್ಲಾರೂ ಕೊಂಡ್ಕೊಂಡ್ರು. ಭಾರಿ ಭಾರಿ ಅಂದ್ರು. ಆಮ್ಯಾಲೆ ಏನ ತಿಪ್ಪರಲಾಗ ಹಾಕಿದ್ರೂ ಐದು ಕಿಲೋನೂ ಖರ್ಚು ಆಗ್ಲಿಲ್ಲ! ಅಲ್ಲೀ ನಾನು ಮಂದಿಗೆ ಒಂದಿಷ್ಟು ಲಾಭ ಆಗ್ಲಿ,

